



ಅರುಣ ಪಿ. ಭಟ್ಟ


## ವಾರಭವಿಷ್ಯ: 08.05.2025ರಿಂದ 14.05.2025ರವರೆಗೆ




ವಾರದ ಆರಂಭದ ಎರಡು ದಿನದಲ್ಲಿ ಕಾರ್ಯಸಿದ್ಧಿ. ಬಂಧುಗಳ ಆಗಮನದಿಂದ ಕುಟುಂಬದಲ್ಲಿ ಸಂತಸದ ವಾತಾವರಣ ನಿರ್ಮಾಣವಾಗುತ್ತದೆ. ಮನೆ ಬಾಡಿಗೆಯಿಂದ ಧನಲಾಭ. ರಾಜಕೀಯದವರಿಗೆ ಕೈ ತಪ್ಪಿ ಹೋಗುವ ಅಧಿಕಾರ ಪ್ರಾಪ್ತಿ. ಗ್ರಂಥರಚನೆಯಲ್ಲಿ ಆಸಕ್ತಿ. ವಾಹನ ಸೌಖ್ಯ. ಮಕ್ಕಳಿಂದ ಮಾನಸಿಕ ಕಿರಿಕಿರಿ. ಬರತಕ್ಕ ಬಾಕಿ ಬರುವುದು. ಶುಭದಿನ: 12. ಶ್ರೀಲಕ್ಷ್ಮೀನರಸಿಂಹ ಪಂಚರತ್ನ ಓದಿರಿ.




ವಾರದ ಪ್ರಾರಂಭದಲ್ಲಿ ಪ್ರವಾಸದಿಂದ ಆಗಮನ. ಸಹೋದರಿಯರಿಂದ ಶುಭವಾರ್ತೆ. ಹಸ್ತಾಲಂಕಾರ ವಸ್ತು ಖರೀದಿ. ವಾರದ ಮಧ್ಯದಲ್ಲಿ ವೈದ್ಯಕೀಯ ಖರ್ಚು ಬರಬಹುದು. ಕೋರ್ಟ್ ಪ್ರಕಣದಲ್ಲಿ ಗೆಲುವು ಸಾಧ್ಯತೆ. ಅವಮಾನಕರ ಪ್ರಸಂಗ. ವಿವಾಹ ಪ್ರಸ್ತಾವದಲ್ಲಿ ಯಶಸ್ಸು. ವಾರಾಂತ್ಯದಲ್ಲಿ ಪರೋಪಕಾರ. ಶುಭದಿನ 11. ಈಶ್ವರನಿಗೆ ತಿಲಾರ್ಚನೆ ಮಾಡಿರಿ.





ದೈಹಿಕ ಅಲರ್ಜಿ. ವಿನಾಕಾರಣ ಹೆದರಿಕೆ ಕಾಡಬಹುದು. ಆದರೆ ಬಹುದಿನಗಳ ನಂತರ ಕುಟುಂಬದಲ್ಲಿ ಸಂತೋಷದ ಸಮಾರಂಭವನ್ನು ಏರ್ಪಡಿಸಲಿದ್ದೀರಿ. ಕಲಾವಿದರು ಮತ್ತು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಯಶಸ್ಸು. ಉತ್ತಮ ವಾಗ್ಝರಿ ಪ್ರದರ್ಶನ. ನಿಮ್ಮ ಸಾಧನೆಗೆ ಮಾನ ಸನ್ಮಾನ ಅರಸಿ ಬರಲಿದೆ. ಇದರಿಂದ ನಿಮ್ಮಲ್ಲಿ ಸಂತೋಷ ಮನೆ ಮಾಡಲಿದೆ. ಶುಭದಿನ: 13. ಕಾರ್ತೀಕೇಯ ಸ್ತೋತ್ರ ಪಠಣ ಮಾಡಿರಿ.





ವಾರದ ಪ್ರಾರಂಭದಲ್ಲಿ ಮನೆ ಕಟ್ಟುವ ಸಮಸ್ಯೆ ಬಗೆಹರಿಯುವುದು. ಕ್ರಯ ವಿಕ್ರಯದಲ್ಲಿ ವಂಚನೆ ನಡೆಯುವ ಸಂಭವ ಇದೆ, ಜಾಗ್ರತೆ ವಹಿಸುವುದು ಅಗತ್ಯ. ವಾರವಿಡೀ ಒಂದಿಲ್ಲೊಂದು ವಿವಾದದಲ್ಲಿ ಸಿಲುಕುವಿರಿ. ತಂದೆಯಿಂದ ಹಣಕಾಸಿನ ಸಹಾಯ ಸಾಧ್ಯತೆ. ಆಕಸ್ಮಿಕ ಆಸ್ಪತ್ರೆಗೆ ಖರ್ಚು ಎದುರಾಗಬಹುದು. ನಿರೀಕ್ಷಿತ ಸ್ಪರ್ಧೆಯಲ್ಲಿ ಯಶಸ್ಸು. ಶುಭದಿನ: 11. ಗುರುದತ್ತಾತ್ರೇಯ ಆರಾಧನೆ ಮಾಡಿರಿ.




ಶಾರೀರಿಕ ಮಾನಸಿಕ ಉತ್ಸಾಹ ವೃದ್ಧಿಸುವುದು. ಸರ್ಕಾರಿ ಕೆಲಸಗಳು ತ್ವರಿತ ಗತಿಯಲ್ಲಿ ನಡೆಯುವುದು. ಪರಿಚಿತ ಸ್ತ್ರೀ ವಿರೋಧ ಕಾಣಿಸುವುದು. ಪಶುಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ. ಹೊಟ್ಟೆನೋವಿನ ಪ್ರಸಂಗ ಕಾಡಬಹುದು. ಅಜ್ಞಾತದಿಂದ ಬೇಸತ್ತಿರುವ ನಿಮಗೆ ಬಿಡುಗಡೆಯ ಯೋಗ ಇದೆ. ವ್ಯವಹಾರದಲ್ಲಿ ಮಹತ್ವದ ಮಾತುಕತೆ ನಡೆಯಲಿದೆ. ಶುಭದಿನ: 12. ಹನುಮಾನ್ ಚಾಲೀಸ್ ಪಠಿಸಿರಿ.





ಅನಿರೀಕ್ಷಿತ ಖರ್ಚಿನ ಪ್ರಸಂಗ. ಸರ್ಕಾರಿ ಕೆಲಸದಲ್ಲಿ ವ್ಯತ್ಯಯ. ನಿಮ್ಮ ಸೇವಕರಿಂದಲೇ ಹಾನಿ ಇಲ್ಲವೇ ತೊಂದರೆ ಆಗಬಹುದು. ಬಂಧುಗಳಿಗೆ ಆಪತ್ತು. ಮನೆಗೆಲಸ ಅರ್ಧಕ್ಕೆ ನಿಲ್ಲುವುದು. ಪ್ರೇಮ ಪ್ರಸಂಗಗಳಲ್ಲಿ ಭಗ್ನತೆ. ಅಧಿಕಾರಿಗಳಿಗೆ ಹಿನ್ನಡೆ. ವಿದ್ಯಾರ್ಥಿಗಳಿಗೆ ಶುಭ. ಕಬ್ಬಿಣ, ಲೋಹ ವ್ಯಾಪಾರ ವ್ಯವಹಾರಸ್ಥರಿಗೆ ಉತ್ತಮ ಲಾಭ. ಶುಭದಿನ: 13. ಉಮಾಮಹೇಶ್ವರ ಪ್ರಾರ್ಥನೆ ಮಾಡಿರಿ.





ವಾರದಲ್ಲಿಯೇ ಉತ್ತಮ ಫಲ ಪ್ರಾಪ್ತಿಯ ರಾಶಿ. ಆಕಸ್ಮಿಕ ಧನಲಾಭ ನಿಮ್ಮಲ್ಲಿ ಅಚ್ಚರಿ ಮೂಡಿಸಲಿದೆ. ನಿರುದ್ಯೋಗಿಗಳಿಗೆ ಉದ್ಯೋಗ ಸಿಗುವುದು. ಸಂತತಿ ಇಲ್ಲದವರಿಗೆ ಸಂತತಿಯ ಸೂಚನೆ. ವಿವಾಹ ಅಪೇಕ್ಷಿಗಳಿಗೆ ಸಂಗಾತಿ ಲಭ್ಯ. ಮನೆಗೆಲಸದ ಹೊಸ ಸೇವಕರು ಸಿಗುವರು. ವ್ಯಾಪಾರದಲ್ಲಿ ಲಾಭ. ಕುಟುಂಬ ಸೌಖ್ಯ. ಶುಭದಿನ: 11. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.





ವಾರವಿಡೀ ಕಷ್ಟದಲ್ಲೂ ಇಷ್ಟ ಫಲ ಪ್ರಾಪ್ತಿಯಾಗುವುದು. ಬಹುದಿನಗಳ ಕನಸಿನ ಪರದೇಶ ಪ್ರವಾಸಕ್ಕೆ ಸಿದ್ಧತೆಯನ್ನು ನಡೆಸಲಿದ್ದೀರಿ. ಸರ್ಕಾರಿ ಅಧಿಕಾರ ಪ್ರಾಪ್ತಿಯೋಗ. ಶಿಕ್ಷಕರಿಗೆ ಪದೋನ್ನತಿಯೊಡನೆ ವರ್ಗಾವಣೆ ಸಂಭವ. ಕುಟುಂಬ ವರ್ಗದಲ್ಲಿ ಅನಾರೋಗ್ಯ. ಪ್ರಾಣಾಪಾಯ ಭೀತಿ. ವಾರಾಂತ್ಯದಲ್ಲಿ ಪರಿಸ್ಥಿತಿ ಸುಧಾರಿಸುವುದು. ಶುಭದಿನ: 09. ದುರ್ಗಾ ಆರಾಧನೆ ಮಾಡಿರಿ.





ಆರೋಗ್ಯದಲ್ಲಿ ಏರುಪೇರು ಉಂಟಾಗಬಹುದು. ಹೆಂಡತಿಯೊಡನೆ ಜಗಳ. ಕಚೇರಿಯ ಕಾಗದ ಪತ್ರಗಳು ಹಠಾತ್ ಕಾಣೆಯಾಗುವ ಸಂಭವವಿದೆ. ದೂರದಿಂದ ಅಶುಭ ವಾರ್ತೆ ಬರುವುದು. ದೈನಂದಿನ ಕೆಲಸಗಳು ಸರಾಗ. ದಿಢೀರ್ ಹಿರಿಯ ಅಧಿಕಾರಿಗಳ ಆಗಮನ. ಸ್ತ್ರೀ ಮೂಲಕ ದ್ರವ್ಯ ಲಾಭ. ಮನೆಯಲ್ಲಿ ದೇವತಾ ಪೂಜೆ ನಡೆಯುವುದು. ಶುಭದಿನ: 10. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ಅಕಸ್ಮಾತ್ ಪೂರ್ವದಿಕ್ಕಿನಲ್ಲಿ ಅಪಘಾತ ಭಯ ಕಾಡಲಿದೆ. ಕಾಲು ನೋವಿನ ಸಮಸ್ಯೆ ಎದುರಾಗಲಿದೆ. ಕೌಟುಂಬಿಕ ಖರ್ಚು ಜಾಸ್ತಿ ಆಗುವುದು ಚಿಂತೆಯನ್ನು ಹುಟ್ಟಿಸಲಿದೆ. ಶತ್ರುಗಳು ತಲೆ ತಗ್ಗಿಸುವರು. ಹಳೆಯ ಮಿತ್ರರ ಭೇಟಿಯಿಂದ ಸಂತಸಪಡುತ್ತೀರಿ. ಮಕ್ಕಳಿಂದ ಶುಭವಾರ್ತೆ ಸಿಗಲಿದೆ. ದಾಂಪತ್ಯ ಸೌಖ್ಯ. ನೀವು ನೀಡಿದ ಸಾಲಗಳು ಹಿಂದಿರುಗಿ ನಿಮ್ಮ ಕೈ ಸೇರಲಿವೆ. ಶುಭದಿನ: 09. ನವಗ್ರಹ ಸ್ತೋತ್ರ ಮಾಡಿರಿ.




ಪ್ರಾರಂಭದಿಂದಲೂ ಶುಭಯೋಗ. ತಂತ್ರಜ್ಞಾನ ವಸ್ತುಗಳ ಖರೀದಿ. ಶೈಕ್ಷಣಿಕ ಇಲಾಖೆಯಲ್ಲಿ ಇರುವವರಿಗೆ ಶುಭ ವಾರ್ತೆ. ಬಡ್ತಿ ಸಿಗುವ ಯೋಗವಿದೆ. ಬ್ಯಾಂಕ್ ನೌಕರರಿಗೆ ವರ್ಗಾವಣೆ ಸಂಭವ. ಕೈಗೊಂಡ ಕೆಲಸಗಳಲ್ಲಿ ನಿರೀಕ್ಷೆಗಿಂತ ಲಾಭ. ಗುತ್ತಿಗೆದಾರರು ಉತ್ತಮ ಧನ ಲಾಭ ಕಾಣುವಿರಿ. ಮಿತ್ರರಿಂದ ವಂಚನೆ ಸಂಭವ. ಮಕ್ಕಳ ಅನಾರೋಗ್ಯ. ಶುಭದಿನ: 12. ನಾಗಫಣಿ ಪೂಜೆ ಕ್ಷೀರಾಭಿಷೇಕ ಮಾಡಿರಿ.




ವಿನಾಕಾರಣ ಮಿತ್ರರು ಶತ್ರುಗಳಾಗುವರು. ಮೇಲಧಿಕಾರಿಗಳಿಂದ ಭಯದ ನೋಟಿಸ್ ಬರಬಹುದು. ಕಲಾವಿದರಿಗೆ, ಸಂಗೀತಗಾರರಿಗೆ ವಾರದ ಮೊದಲರ್ಧ ಉತ್ತಮ. ಮಕ್ಕಳ ಆರೋಗ್ಯದಲ್ಲಿ ಕೊಂಚ ಪ್ರಗತಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಹಿನ್ನಡೆ. ವಾಹನ ಚಾಲಕರಿಗೆ ಎಚ್ಚರ ಅಗತ್ಯ. ವಾರಾಂತ್ಯದಲ್ಲಿ ಧನಪ್ರಾಪ್ತಿ. ಕುಟುಂಬದಲ್ಲಿ ಸೌಖ್ಯ. ಶುಭದಿನ: 09. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.